**ಸಾಕ್ಷಿಯನ್ನು ದಿನಾಂಕ: 23-08-2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು :- ಡಿ.ಹೆಚ್.ಆರ್. ಪರ ವಕೀಲರಾದ ಶ್ರೀ ಕೆ.ಎಲ್.ಪ್ರಭಾಕರ್ ರವರಿಂದಃ**

ನಾನು ನನ್ನ ಮಗನಾದ ಟಿ.ಪಿ ಜೊಸೇಫ್ ಸಚಿನ್‌ನು ನೀಡಿರುವ ಮುಕ್ತಿಯಾರು ಪತ್ರದ ಮೇರೆಗೆ ಆತನ ಪರವಾಗಿ ಸಾಕ್ಷಿ ನುಡಿಯಲು ಬಂದಿರುತ್ತೇನೆ. ನನ್ನ ಮಗ ಖುದ್ದಾಗಿ ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷಿ ನುಡಿಯಲು ತೊಂದರೆ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆತ ಊರಿನಲ್ಲಿ ಇಲ್ಲ ಎಂದು ಹೇಳುತ್ತಾರೆ. ತಕರಾರು ಅರ್ಜಿಯನ್ನು ನನ್ನ ಮಗ ಸಲ್ಲಿಸಿರುತ್ತಾನೆ. ಬಾಗಲೂರು ಗ್ರಾಮದ ಮಾರೇನಹಳ್ಳಿ ಪಂಚಾಯಿತಿಯ ನಿವೇಶನ ಸಂಖ್ಯೆಃ 17 ಕ್ಕೆ ಸಂಬಂಧಿಸಿದಂತೆ ತಕರಾರು ಅರ್ಜಿಯನ್ನು ಸಲ್ಲಿಸಿರುತ್ತೇನೆ. ಸದರಿ ನಿವೇಶನವನ್ನು ನನ್ನ ಮಗನು ಜೊಸೇಫ್ ಚಾಕೋ ಮತ್ತು ಅವರ ಮಕ್ಕಳಿಂದ 2012 ನೇ ಸಾಲಿನಲ್ಲಿ ಖರೀದಿ ಮಾಡಿರುತ್ತಾನೆ. ನಿವೇಶನವನ್ನು ಖರೀದಿಸುವ ಸಂದರ್ಭದಲ್ಲಿ ಕ್ರಯಪತ್ರ, ಪಹಣಿ ಪತ್ರಿಕೆ, ಋಣಭಾರ ಪತ್ರಿಕೆ ಮತ್ತು ಖಾತೆಯನ್ನು ಪರಿಶೀಲಿಸಿರುತ್ತೇವೆ. ಜೊಸೇಫ್ ಚಾಕೋ ರವರು ಯಾರಿಂದ ಜಮೀನನ್ನು ಖರೀದಿ ಮಾಡಿದ್ದಾರೆ ಎನ್ನುವುದರ ಬಗ್ಗೆ ದಾಖಲೆಯನ್ನು ನೋಡಿರುವುದಿಲ್ಲ. ನಿವೇಶನವನ್ನು ಖರೀದಿಸುವ ಪೂರ್ವದಲ್ಲಿ ವಕೀಲರಿಂದ ಮೌಖಿಕವಾಗಿ ಕಾನೂನಿನ ಅಭಿಪ್ರಾಯ ಪಡೆದಿರುತ್ತೇವೆ.

ನಿವೇಶನ ಸಂಖ್ಯೆಃ 17 ನ್ನು ಯಾವ ಸರ್ವೆ ನಂಬರ್ ನಲ್ಲಿ ಮಾಡಲಾಗಿದೆ ಎನ್ನುವುದು ಗೊತ್ತಿಲ್ಲ. ನಿವೇಶನ ಸಂಖ್ಯೆಃ 17 ಇರುವ ಲೇಔಟ್ ನ್ನು ಜೊಸೇಫ್ ಚಾಕೋ ನಿರ್ಮಿಸಿರುತ್ತಾರೆ. ಸದರಿ ಜಮೀನಿನಲ್ಲಿ ಎಷ್ಟು ನಿವೇಶನಗಳನ್ನು ನಿರ್ಮಿಸಿದ್ದಾರೆ ಎನ್ನುವುದು ಗೊತ್ತಿಲ್ಲ. ಲೇಔಟ್ ನಕಾಶೆಯನ್ನು ಯಾವ ಪಂಚಾಯಿತಿಯವರು ಅನುಮೋದಿಸಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ.

ನಿವೇಶನ ಸಂಖ್ಯೆಃ 17 ನ್ನು ನಿರ್ಮಿಸಿರುವ ಜಮೀನನ್ನು ಜೊಸೇಫ್ ಚಾಕೋ ರವರು ಶ್ರೀಮತಿ ರುದ್ರಬಸಮ್ಮ ಎನ್ನುವವರಿಂದ ಖರೀದಿ ಮಾಡಿರುತ್ತಾರೆ. ಸದರಿ ಜಮೀನು ಶ್ರೀಮತಿ ರುದ್ರಬಸಮ್ಮರಿಗೆ ಹೇಗೆ ಬಂದಿತ್ತು ಎಂದು ನನಗೆ ಗೊತ್ತಿಲ್ಲ.

ನಿವೇಶನ ಸಂಖ್ಯೆಃ 17 ನ್ನು ನಿರ್ಮಿಸಿರುವ ಜಮೀನು ಮೂಲತಃ ಯಾರಿಗೆ ಸೇರಿತ್ತು ಎನ್ನುವುದನ್ನು ನಾನು ತಿಳಿದುಕೊಂಡಿರುವುದಿಲ್ಲ.

ಯಲಹಂಕ ತಾಲ್ಲೂಕಿನ ಜಾಲಾ ಹೋಬಳಿಯ ಚಾಗಲಟ್ಟಿ ಗ್ರಾಮದ ಸರ್ವೆ ನಂ.112/2 ರ ವಿಸ್ತೀರ್ಣ 01-26 ಎಕರೆಯು ಮೂಲತಃ ಅದೇ ಗ್ರಾಮದ ದೊಡ್ಡಮಲ್ಲಪ್ಪ ಎನ್ನುವವರಿಗೆ ಸೇರಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ದೊಡ್ಡಮಲ್ಲಪ್ಪನಿಗೆ ನಂಜುಂಡಪ್ಪ ಮತ್ತು ಅಣ್ಣಪ್ಪ ಎನ್ನುವ ಇಬ್ಬರು ಮಕ್ಕಳಿದ್ದರು ಎಂದರೆ ನನಗೆ ಗೊತ್ತಿಲ್ಲ.  ದೊಡ್ಡಮಲ್ಲಪ್ಪ ಮತ್ತು ಆತನ ಇಬ್ಬರು ಮಕ್ಕಳು ಸೇರಿ ಚಾಗಲಟ್ಟಿ ಗ್ರಾಮದ ಸರ್ವೆ ನಂ.112/2 ರ 01-26 ಎಕರೆಯನ್ನು ಡಿ.ಹೆಚ್.ಆರ್. ನ ತಾತನಾದ ಅಪ್ಪಯ್ಯ ಶಾಮಪ್ಪ ಎನ್ನುವವರಿಗೆ ದಿನಾಂಕಃ 22-04-1973 ರಂದು ನೋಂದಾಯಿತ ಶುದ್ಧ ಕ್ರಯಪತ್ರದ ಮುಖಾಂತರ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಿನಾಂಕದಿಂದ ಸದರಿ ಜಮೀನಿನ ಮಾಲೀಕರಾಗಿ ಡಿ.ಹೆಚ್.ಆರ್. ನ ತಾತನಾದ ಅಪ್ಪಯ್ಯ ಶಾಮಪ್ಪನವರು ಸ್ವಾಧೀನದಲ್ಲಿದ್ದರು ಎಂದರೆ ನನಗೆ ಗೊತ್ತಿಲ್ಲ.  ಸದರಿ  ಡಿ.ಹೆಚ್.ಆರ್. ನ ತಾತನಾದ ಅಪ್ಪಯ್ಯ ಶಾಮಪ್ಪನವರು ದಿನಾಂಕಃ 12-03-2003 ರವರೆಗೆ ಸದರಿ ಸರ್ವೆ ನಂ.112/2 ಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಯನ್ನು ಯಾರಿಗೂ ಬರೆದುಕೊಟ್ಟಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪ್ಪಯ್ಯ ಶಾಮಪ್ಪನವರಿಗೆ ಬರೆದುಕೊಟ್ಟಿದ್ದ ಕ್ರಯಪತ್ರ ದಿನಾಂಕಃ 12-03-2003 ರವರೆಗೆ ರದ್ದಾಗಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ.

ದಿನಾಂಕಃ 12-03-2003 ರಂದು ಶ್ರೀಮತಿ ರುದ್ರಬಸಮ್ಮ ಮತ್ತು ಶಿವಮಣಿಯವರು ಜೊಸೇಫ್ ಚಾಕೋ ರವರಿಗೆ ಸರ್ವೆ ನಂ.112/2 ಕ್ಕೆ ಸಂಬಂಧಿಸಿದಂತೆ ಕ್ರಯಪತ್ರವನ್ನು ಬರೆದುಕೊಡುವ ಸಮಯದಲ್ಲಿ ಸದರಿ ಶ್ರೀಮತಿ ರುದ್ರಬಸಮ್ಮ ಹೆಸರಿಗೆ ಐ.ಹೆಚ್.ಆರ್. ಸಂಖ್ಯೆಃ 11/95-96 ರ ಪ್ರಕಾರ ಖಾತೆಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ.  ದೊಡ್ಡಮಲ್ಲಪ್ಪ ಮತ್ತು ಅವರ ಇಬ್ಬರ ಮಕ್ಕಳು ಶ್ರೀಮತಿ ರುದ್ರಬಸಮ್ಮ ಮತ್ತು ಶಿವಮಣಿಯ ಪರವಾಗಿ ಸರ್ವೆ ನಂ.112/2 ಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಬರೆದುಕೊಟ್ಟಿಲ್ಲ ಎಂದರೆ ನನಗೆ ಗೊತ್ತಿಲ್ಲ.  ಜೊಸೇಫ್ ಚಾಕೋ ಪರವಾಗಿ ಕ್ರಯಪತ್ರ ಬರೆದುಕೊಡಲು ದಿನಾಂಕಃ 12-03-2003 ರಂದು ಶ್ರೀಮತಿ ರುದ್ರಬಸಮ್ಮ ಮತ್ತು ಶಿವಮಣಿಯವರಿಗೆ ಯಾವುದೇ

ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ದಿನಾಂಕಃ 12-03-2003 ರಂದು ಸರ್ವೆ ನಂ.112/2 ರ ಋಣಭಾರ ಪತ್ರಿಕೆಯಲ್ಲಿ ಅಪ್ಪಯ್ಯ ಶಾಮಪ್ಪನವರ ಹೆಸರಿತ್ತು ಎಂದರೆ ನನಗೆ ಗೊತ್ತಿಲ್ಲ. ದಿನಾಂಕಃ 12-03-2003 ರಂದು ಅಪ್ಪಯ್ಯ ಶಾಮಪ್ಪ ಬದುಕಿದ್ದರು ಎಂದರೆ ನನಗೆ ಗೊತ್ತಿಲ್ಲ.

ದಿನಾಂಕಃ 10-10-2013 ರಂದು ಅಪ್ಪಯ್ಯ ಶಾಮಪ್ಪನವರು ಸರ್ವೆ ನಂ.112/2 ರ 01-26 ಎಕರೆಯನ್ನು ಡಿ.ಹೆಚ್.ಆರ್ ಗಳಾದ ರವಿಕುಮಾರ್ ಮತ್ತು ಚಂದ್ರಶೇಖರ್ ಪರವಾಗಿ ನೋಂದಾಯಿತ ಮರಣ ಶಾಸನದ ಮುಖಾಂತರ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪ್ಪಯ್ಯ ಶಾಮಪ್ಪನ ಮರಣಾನಂತರ ಡಿ.ಹೆಚ್.ಆರ್ ಗಳು ಸದರಿ ಜಮೀನಿನ ಮಾಲೀಕರಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಸದರಿ ಜಮೀನಿಗೆ ಸಂಬಂಧಿಸಿದಂತೆ ಖಾತೆಯನ್ನು ತಮ್ಮ ಹೆಸರಿಗೆ ಬದಲಾವಣೆ ಮಾಡಿಕೊಂಡಿದ್ದಾರೆ ಮತ್ತು ಕಂದಾಯ ಕಟ್ಟುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಶ್ರೀಮತಿ ರುದ್ರಬಸಮ್ಮ ಮತ್ತು ಶಿವಮಣಿಯವರು ಸರ್ವೆ ನಂ.112/2 ಕ್ಕೆ ಸಂಬಂಧಿಸಿದಂತೆ ಜೊಸೇಫ್ ಚಾಕೋ ಮತ್ತು ಆತನ ಹೆಂಡತಿಯ ಪರವಾಗಿ ಬರೆದುಕೊಟ್ಟಿರುವ ಕ್ರಯಪತ್ರವನ್ನು ಡಿ.ಹೆಚ್.ಆರ್ ಗಳು ಅಸಲು ದಾವಾ ಸಂಖ್ಯೆಃ 222/2014 ರಲ್ಲಿ ಪ್ರಶ್ನಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ಡಿ.ಹೆಚ್.ಆರ್ ಗಳ ಪರವಾಗಿ ಡಿಕ್ರಿಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಾನು ನಿವೇಶನ ಸಂಖ್ಯೆಃ 17 ನ್ನು 2012 ರಲ್ಲಿ ಖರೀದಿಸಿದ್ದು, 2020 ನೇ ಸಾಲಿನಲ್ಲಿ ಡಿ.ಹೆಚ್.ಆರ್ ಗಳು ಬಂದು ನಮಗೆ ತೊಂದರೆ ನೀಡಿದ್ದರಿಂದ ಅರ್ಜಿ ಸಲ್ಲಿಸಿರುತ್ತೇವೆ. ಅಸಲು ದಾವಾ ಸಂಖ್ಯೆಃ 222/2014 ರಲ್ಲಿ ನ್ಯಾಯಾಲಯ ಮಾಡಿರುವ ಆದೇಶವನ್ನು ನಾವು ಪ್ರಶ್ನಿಸಿರುವುದಿಲ್ಲ. ಅಸಲು ದಾವಾ ಸಂಖ್ಯೆಃ 222/2014 ರಲ್ಲಿ ಆಗಿದ್ದ ತೀರ್ಪನ್ನು ಜೊಸೇಫ್ ಚಾಕೋ ರವರು ಸಂಕೀರ್ಣ ಅರ್ಜಿ ಸಂಖ್ಯೆಃ 35/2019 ರಲ್ಲಿ ಪ್ರಶ್ನಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಅರ್ಜಿಯು ವಜಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

ಸರ್ವೆ ನಂ.112/2 ನ್ನು ವ್ಯವಸಾಯೇತರ ಉದ್ದೇಶಕ್ಕೆ ಪರಿವರ್ತಿಸಿದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರು ಮಾಡಿರುವುದಿಲ್ಲ. 2020 ನೇ ಸಾಲಿನಲ್ಲಿ ನಾವು ನಿವೇಶನ ಸಂಖ್ಯೆಃ 17 ರ ಸ್ವಾಧೀನದಲ್ಲಿ ಇದ್ದ ಬಗ್ಗೆ ದಾಖಲೆಗಳನ್ನು ಹಾಜರು

ಮಾಡಿರುತ್ತೇವೆ. ಜೊಸೇಫ್ ಚಾಕೋ ಮತ್ತು ಇತರರು ನಿವೇಶನ ಸಂಖ್ಯೆಃ 17 ನ್ನು ನಮಗೆ ಮಾರಿದ್ದಾರೆ ಎಂದು ಹೇಳುವ ಕ್ರಯಪತ್ರವನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಿವೇಶನ ಸಂಖ್ಯೆಃ 17 ರ ನನ್ನ ಮಗನಿಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ಡಿ.ಹೆಚ್.ಆರ್ ರವರಿಗೆ ಸೇರಿರುವ ಜಮೀನನ್ನು ಎತ್ತಿಹಾಕುವ ಸಲುವಾಗಿ ನಿವೇಶನ ಸಂಖ್ಯೆಃ 17 ನ್ನು ಖರೀದಿ ಮಾಡಿದ್ದೇವೆ ಎನ್ನುವ ರೀತಿಯಲ್ಲಿ ದಾಖಲೆಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ತಕರಾರು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಡಿ.ಹೆಚ್.ಆರ್ ರವರು ಸರ್ವೆ ನಂ.112/2 ರ ಮಾಲೀಕರು ಮತ್ತು ಅವರೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಡಿ.ಹೆಚ್.ಆರ್ ರವರಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**(**ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**